# ಭಾರತೀಯ ಜನತಾ ಪಾರ್ಟಿ
## 11, ಅಶೋಕ ರೋಡ್, ನವದೆಹಲಿ
### ಪತ್ರಿಕಾ ಪ್ರಕಟಣೆ: 20 ಜನವರಿ 2014

ಸಂಸದ ಹಾಗೂ ಭಾರತೀಯ ಜನತಾ ಪಾರ್ಟಿಯ ಮಾಜಿ ರಾಷ್ಟ್ರೀಯ ಅಧ್ಯಕ್ಷರಾದ ಶ್ರೀ ವೆಂಕಯ್ಯ ನಾಯ್ಡು ಅವರು ಸೀಮಾಂಧ್ರ ಪ್ರದೇಶದ 250ಕ್ಕೂ ಹೆಚ್ಚು ಪ್ರಮುಖ ಆಂಧ್ರ ಭಾಜಪ ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡಿದರು. ಆಂಧ್ರ ಪ್ರದೇಶ ವಿಭಜನೆ ನಂತರ, ಸೀಮಾಂಧ್ರ ಪ್ರದೇಶಕ್ಕೆ ನ್ಯಾಯದೊರಕಿಸಬೇಕು ಎಂಬ ಬೇಡಿಕೆಯೊಂದಿಗೆ ಈ ಕಾರ್ಯಕರ್ತರು ದೆಹಲಿಯ ಜಂತರ್ ಮಂತರ್‌ನಲ್ಲಿ ಧರಣಿ ಕೂತಿದ್ದರು. ತಮ್ಮ ಭಾಷಣದಲ್ಲಿ ಅವರು ಕೆಳಕಂಡ ಪ್ರಮುಖ ವಿಚಾರಗಳನ್ನು ತಿಳಿಸಿದರು:

ಆಂಧ್ರಪ್ರದೇಶ ವಿಭಜನೆ ಪಕ್ಷದ ಆಂತರಿಕ ವಿಚಾರವೆಂಬಂತೆ ಕಾಂಗ್ರೆಸ್ ಪಕ್ಷ ನಡೆದುಕೊಳ್ಳುತ್ತಿದೆ. ಈ ವಿಚಾರವನ್ನು ಸರಿಯಾಗಿ ನಿರ್ವಹಿಸದ ಅದು, ಬೇಜವಾಬ್ದಾರಿಯಿಂದ ಹಾಗೂ ಬಾಲಿಶವಾಗಿ ನಡೆದುಕೊಳ್ಳುತ್ತಿದೆ. ಆಂಧ್ರವನ್ನು ವಿಭಜಿಸಿ ತೆಲಂಗಾಣ ರಾಜ್ಯ ಸ್ಥಾಪಿಸುವ ಭರವಸೆಯೊಂದಿಗೆ 2004ರಲ್ಲಿ ಸರ್ಕಾರದ ಚುಕ್ಕಾಣಿ ಹಿಡಿದು ಈಗ ಒಂಬತ್ತು ವರ್ಷಗಳವರೆಗೂ ನಿದ್ರಿಸುತ್ತಿದ್ದ ಅದು ಈಗ ಥಟ್ಟನೆ ಚುನಾವಣೆಗೆ ಮುನ್ನ ಎಚ್ಚರಗೊಂಡು ಶ್ರೀ ನರೇಂದ್ರ ಮೋದಿಯವರನ್ನು ಎದುರಿಸಲು ಆಗದೆ ತೆಲಂಗಾಣ ವಿಚಾರವನ್ನು ತೆಗೆದಿದ್ದಾರೆ. ಆದರೂ ಸರ್ಕಾರದಲ್ಲಿ ಸ್ಪಷ್ಟತೆ ಹಾಗೂ ಬದ್ಧತೆ ಕಾಣಿಸುವುದಿಲ್ಲ.

ಸೀಮಾಂಧ್ರ ಪ್ರಾಂತ್ಯದ ಜನರಿಗೆ ನ್ಯಾಯಕೊಡಿಸುವ ಮತ್ತು ಪ್ರತ್ಯೇಕ ತೆಲಂಗಾಣ ರಾಜ್ಯ ರಚಿಸುವ ವಿಚಾರಕ್ಕೆ ಭಾಜಪ ಬದ್ಧವಾಗಿದೆ ಎಂದು ಶ್ರೀ ನಾಯ್ಡು ತಿಳಿಸಿದರು. ಯಾವೊಂದು ವಿರೋಧವಾಗಲಿ ಅಥವಾ ಪಕ್ಷದ ನಿಲವಿನಲ್ಲಿ ಬದಲಾವಣೆಯಾಗಲಿ ಸಾಧ್ಯವಿಲ್ಲ. 10 ಜಿಲ್ಲೆಗಳನ್ನು ಒಳಗೊಂಡ ತೆಲಂಗಾಣ ರಾಜ್ಯ ಸ್ಥಾಪಿಸಲು ಭಾಜಪ ಕಟಿಬದ್ಧವಾಗಿದೆ ಎಂದು ಅವರು ಪುನರುಚ್ಚರಿಸಿದರು. ಪ್ರಸ್ತಾಪಿತ ಮಸೂದೆ ದೋಷಪೂರಿತವಾಗಿದ್ದು ರಾಜ್ಯದ ಜನರ, ಅದರಲ್ಲೂ ವಿಶೇಷವಾಗಿ ಸೀಮಾಂಧ್ರ ಜನರ ಆಶೋತ್ತರಗಳಿಗೆ ಸ್ಪಂದಿಸುವುದಿಲ್ಲ ಎಂಬ ಭಾವನೆ ಭಾಜಪದ್ದಾಗಿದೆ. ತೆಲಂಗಾಣದಲ್ಲೂ ಮಸೂದೆಯ ಕೆಲವು ಅಂಶಗಳ ಕುರಿತು ಭೀತಿಯಿದೆ.

ರಾಜ್ಯ ವಿಧಾನಸಭೆಯ ಅಭಿಪ್ರಾಯಗಳನ್ನು ಆಧರಿಸಿ ಈ ಪ್ರದೇಶದ ಸಂವೇದನೆಗಳಿಗೆ ಕೇಂದ್ರ ಸರ್ಕಾರ ಸ್ಪಂದಿಸಬೇಕು, ವಿವಿಧ ಪಕ್ಷಗಳು ಹಾಗೂ ಜನರು ನೀಡುವ ಸಕಾರಾತ್ಮಕ ಸಲಹೆಗಳನ್ನು ಪಡೆದು ಮಸೂದೆಗೆ ಸೂಕ್ತ ತಿದ್ದುಪಡಿ ಮಾಡಬೇಕು. ಭಾಜಪ ಅಭಿಮತ ತಿಳಿಸಬೇಕಾದರೆ, ಅದು ರಾಜ್ಯದ ವಿಭಜನೆಯ ಪಕ್ಷದಲ್ಲಿದೆ, ಜೊತೆಗೆ ಸೀಮಾಂಧ್ರ ಪ್ರಾಂತ್ಯದ ಜನರಿಗೆ ನ್ಯಾಯ ದೊರಕಬೇಕು ಎಂಬ ಇಂಗಿತವೂ ಅದಕ್ಕಿದೆ. ಕಾಂಗ್ರೆಸ್ ಇದನ್ನು ಮಾಡದಿದ್ದರೆ, ಭಾಜಪ ಅಧಿಕಾರಕ್ಕೆ ಬಂದಾಗ ಈ ಕಾರ್ಯವನ್ನು ಸಿದ್ಧಿಸುತ್ತದೆ.

ಬೇಜವಾಬ್ದಾರಿಯಿಂದ ಕೆಲವಾರು ನಾಯಕರು ಮಾಡುತ್ತಿರುವ ಪ್ರಚೋದನಕಾರಿ ಭಾಷಣಗಳಿಂದ ಪ್ರಚೋದಿತರಾಗದೆ, ತೆಲಂಗಾಣ ವಿಚಾರದಲ್ಲಿ ಬೆಂಬಲ ಸೂಚಿಸಿ ತಮ್ಮ ನಿಲವು ಬದಲಾಯಿಸಿದ ನಾಯಕರು ಮತ್ತು ಪಕ್ಷಗಳಿಗೆ ಮಾರುಹೋಗದಂತೆ ಶ್ರೀ ನಾಯ್ಡು ಜನರಿಗೆ ಮನವಿ ಮಾಡಿಕೊಂಡರು. ತಾತ್ಕಾಲಿಕ ಭಾವೋದ್ವೇಗದ ಪ್ರತಿಕ್ರಿಯೆ ಹಾಗೂ ಗಂಭೀರ ಪ್ರಚೋದನೆಗಳ ಹೊರತಾಗಿಯೂ ಪಕ್ಷದ ನಿಲುವಿಗೆ ಬದ್ಧತೆ ಪ್ರದರ್ಶಿಸಿದ ಸೀಮಾಂಧ್ರ ಮತ್ತು ತೆಲಂಗಾಣ

ಪ್ರಾಂತ್ಯದ ಭಾಜಪ ಘಟಕಗಳನ್ನು ಅವರು ಅಭಿನಂದಿಸಿದರು. ಮಸೂದೆಯ ಅಧ್ಯಯನ ನಡೆಸಿರುವ ಪಕ್ಷದ ಕೇಂದ್ರ ನಾಯಕರು ಸೀಮಾಂಧ್ರ ಪ್ರಾಂತ್ಯದ ಪಕ್ಷದ ನಾಯಕರ ಸಕಾರಾತ್ಮಕ ಸಲಹೆಗಳನ್ನು ಪರಿಗಣಿಸಿ ಸಂಸತ್ ಅಧಿವೇಶನದಲ್ಲಿ ಸೂಕ್ತ ತಿದ್ದುಪಡಿಗೆ ಒತ್ತಾಯಿಸಲಿದೆ ಎಂದು ಶ್ರೀ ನಾಯ್ಡು ಸೀಮಾಂಧ್ರ ಜನರಿಗೆ ಭರವಸೆ ನೀಡಿದರು.

ಈ ಕಾರ್ಯವನ್ನು ಭಾಜಪಗೆ ನೀಡಿದ್ದರೆ ಅದು ಮಸೂದೆ ಸಿದ್ಧಪಡಿಸುವ ಮುನ್ನ ಎಲ್ಲಾ ಸಂಬಂಧಪಟ್ಟವರ ವಿಶ್ವಾಸಗಳಿಸುವ ಕಾರ್ಯವನ್ನು ಮಾಡುತ್ತಿತ್ತು. ಆಡಳಿತ ಪಕ್ಷದ ಸದಸ್ಯರು, ಸಂಸದರು, ಶಾಸಕರು ಮತ್ತು ಅನ್ಯ ನಾಯಕರೊಂದಿಗೂ ಮಾತುಕತೆ ನಡೆಸಿದ ನಂತರ ಅವರ ಮನವೊಲಿಸಿ, ಸೀಮಾಂಧ್ರ ಪ್ರಾಂತ್ಯಕ್ಕೂ ಐಐಟಿ, ವಾಣಿಜ್ಯ ಶಾಲೆಗಳು, ವಿಮಾನನಿಲ್ದಾಣಗಳ ಅಭಿವೃದ್ಧಿ, ಅಗತ್ಯ ಅನ್ಯ ಮೂಲಭೂತಸೌಕರ್ಯಗಳನ್ನು ಮಂಜೂರು ಮಾಡುವ ಮೂಲಕ ಅವರಲ್ಲಿ ವಿಶ್ವಾಸ ಮೂಡಿಸುವ ಮತ್ತು ಅವರ ಹಿತಾಸಕ್ತಿ ಕುರಿತ ತೊಡಕುಗಳನ್ನು ನಿವಾರಿಸುವ ಪ್ರಯತ್ನವನ್ನು ಭಾಜಪ ಮಾಡುತ್ತಿತ್ತು ಎಂದು ಶ್ರೀ ನಾಯ್ಡು ತಿಳಿಸಿದರು.

ರಾಜ್ಯದ ವಿವಿಧ ಭಾಗಗಳಲ್ಲಿ ತೆರಿಗೆ ವಿನಾಯತಿ ಘೋಷಿಸುವ ಮೂಲಕ ಕೈಗಾರಿಕೆಗಳಿಗೆ ಉತ್ತೇಜನ ನೀಡಿ, ಉದ್ಯೋಗ ಅವಕಾಶಗಳನ್ನು ಸೃಷ್ಟಿಸುವ ಸಲಹೆಯನ್ನು ಶ್ರೀ ನಾಯ್ಡು ನೀಡಿದರು. ಕೈಗಾರಿಕೆಗಳನ್ನು ಆರಂಭಿಸುವ ಕುರಿತು ಆಶ್ವಾಸನೆಗಳು ಸಾಲದು, ಅದಕ್ಕೆ ಯೋಜನಾ ಆಯೋಗದ ಅನುಮೋದನೆ ಬೇಕು ಮತ್ತು ಧನಸಹಾಯ ಬೇಕು. ವಿವಿಧ ಪ್ರಾಂತ್ಯಗಳಲ್ಲಿ ಅಭಿವೃದ್ಧಿ ವಲಯಗಳನ್ನು ಆರಂಭಿಸುವ ಸಲಹೆಯನ್ನೂ ಅವರು ನೀಡಿದರು.

ಅಪೂರ್ಣವಾದ ಮತ್ತು ನೀರಿನ ಹಂಚಿಕೆಯ ಖಾತ್ರಿಯಿಲ್ಲದ ನೀರಾವರಿ ಯೋಜನೆಗಳಿಗೆ ಶಾಸನಾತ್ಮಕ ರಕ್ಷಣೆ ನೀಡಬೇಕು ಮತ್ತು ವಿವಿಧ ಸರ್ಕಾರಗಳು ಮಂಜೂರು ಮಾಡಿದ ಈ ಯೋಜನೆಗಳು ಮುಂದುವರೆದು ವಿಭಜಿತ ರಾಜ್ಯಗಳು ಇದಕ್ಕೆ ಮಾನ್ಯತೆ ನೀಡಬೇಕು ಎಂಬ ಅಂಶವನ್ನು ಮಸೂದೆಯಲ್ಲಿ ಪ್ರಸ್ತಾಪಿಸಬೇಕು ಎಂದು ಶ್ರೀ ನಾಯ್ಡು ತಿಳಿಸಿದರು.

ಪೊಲವರಂ ಯೋಜನೆ ಸೀಮಾಂಧ್ರ ಭಾಗದ ಜೀವಜಲವಾದ ಕಾರಣ ಆ ಯೋಜನೆಯನ್ನು ಬಹು ಬಳಕೆ ಯೋಜನೆಯೆಂದು ಘೋಷಿಸಬೇಕು ಎಂದು ಶ್ರೀ ನಾಯ್ಡು ಬಲವಾಗಿ ಪ್ರತಿಪಾದಿಸಿದರು. ಕುಡಿಯುವ ನೀರು ಹಾಗೂ ನೀರಾವರಿ ಅಲ್ಲದೆ ವಿದ್ಯುತ್ ಉತ್ಪಾದನೆಗೂ ಇದರಿಂದ ಉಪಯೋಗವಾಗಬೇಕು. ಈ ಯೋಜನೆಗೆ 1980ರಲ್ಲಿ ಚಾಲನೆ ದೊರೆತಿದ್ದು, ಮೂರು ಮುಖ್ಯಮಂತ್ರಿಗಳಾದ ದಿವಂಗತ ಶ್ರೀ ಚನ್ನಾ ರೆಡ್ಡಿ, ದಿವಂಗತ ಶ್ರೀ ಅಂಜಯ್ಯ ಹಾಗೂ ದಿವಂಗತರಾದ ಶ್ರೀ ಎನ್‌ಟಿ ರಾಮಾ ರಾವ್ ಅವರು ಇದಕ್ಕೆ ಶಂಕುಸ್ಥಾಪನೆ ನೆರವೇರಿಸಿದ್ದರು. ಈ ಯೋಜನೆ ಶೀಘ್ರ ಪೂರ್ಣಗೊಳಿಸಬೇಕೆಂದು ಎಪಿಬಿಜೆಪಿ ಮೂರು ಬಾರಿ ನಿರ್ಣಯ ಕೈಗೊಂಡಿದೆ ಹಾಗೂ ಪ್ರತಿಭಟನೆ ನಡೆಸಿದೆ ಎಂದು ಶ್ರೀ ನಾಯ್ಡು ಸ್ಮರಿಸಿದರು. ರಾಜ್ಯದ ವಿಭಜನೆ ಪ್ರಸ್ತಾಪಕ್ಕೆ ಸ್ವೀಕೃತಿ ದೊರೆತ ತಕ್ಷಣ, ಅಂದರೆ 4-5 ವರ್ಷಗಳ ಹಿಂದೆಯೇ ಪೋಲವರಂ ಯೋಜನೆ ಪೂರ್ಣಗೊಳಿಸಲು ಉದ್ಭವಿಸಿರುವ ತೊಡಕುಗಳನ್ನು ನಿವಾರಿಸಬೇಕಿತ್ತು ಎಂದು ಅವರು ಅಭಿಪ್ರಾಯ ಪಟ್ಟರು. ಭೂ ಸ್ವಾಧೀನ, ಮುಳುಗಡೆ ಇತ್ಯಾದಿ ವಿಚಾರಗಳಲ್ಲಿ ಅಗತ್ಯವಾದ ಸ್ಪಷ್ಟ ಅಂಶಗಳನ್ನು ಪ್ರಸ್ತಾಪಿತ ಮಸೂದೆಯಲ್ಲಿ ಸೇರಿಸುವ ಮೂಲಕ ಮುಂಬರುವ ದಿವಸಗಳಲ್ಲಿ ಸಂಭವಿಸಬಹುದಾದ ವ್ಯಾಜ್ಯಗಳನ್ನು ತಪ್ಪಿಸಬಹುದು ಎಂದು ಅವರು ನುಡಿದರು.

ಸಂಬಂಧಪಟ್ಟ ಎಲ್ಲಾ ವರ್ಗಗಳೊಂದಿಗೂ ಸಮಾಲೋಚನೆ ನಡೆಸಿ, ಅಗತ್ಯ ಮೂಲಭೂತ ಸೌಕರ್ಯಗಳನ್ನು ಮತ್ತು ಹಣಕಾಸು ನೆರವನ್ನೂ ನೀಡುವ ಜೊತೆಗೆ ಹೊಸ ರಾಜಧಾನಿಯ

ಹೆಸರನ್ನು ಮಸೂದೆಯಲ್ಲೇ ಘೋಷಿಸಬೇಕು ಎಂದೂ ಸಹ ಶ್ರೀ ನಾಯ್ಡು ಆಗ್ರಹಿಸಿದ್ದಾರೆ. ಸೀಮಾಂಧ್ರ ಪಾಂತ್ಯದಿಂದ ಬಹುದೂರದಲ್ಲಿರುವ ಹೈದರಾಬಾದ್ ಜಂಟಿ ರಾಜಧಾನಿಯಾಗಲು ಸಾಧ್ಯವಿಲ್ಲವೆಂಬ ಆಭಪ್ರಾಯ ಅವರದ್ದಾಗಿದೆ.

ಹೈದರಾಬಾದಿನಲ್ಲಿ ವಾಸಿಸುವ ವಿವಿಧ ಪ್ರಾಂತ್ಯದ ಜನರ ಹಿತಾಸಕ್ತಿ ಕಾಪಾಡಬೇಕು ಮತ್ತು ಭಾಜಪ ಈ ವಿಚಾರದಲ್ಲಿ ಸ್ಥಿರ ಸಂಕಲ್ಪ ಹೊಂದಿದೆ ಎಂದು ಶ್ರೀ ನಾಯ್ಡು ನುಡಿದರು. ಎರಡೂ ರಾಜ್ಯಗಳಿಗೆ ಅಗತ್ಯ ಸರ್ಕಾರಿ ಸಿಬ್ಬಂದಿಗಳನ್ನು ಪೂರೈಸಲು, ಇತ್ತೀಚೆಗೆ ವಿಭಜನೆಗೊಂಡ ಕೆಲವು ರಾಜ್ಯಗಳ ಮಾದರಿಯನ್ನೇ ಅನುಸರಿಸಬೇಕು ಎಂದು ಶ್ರೀ ನಾಯ್ಡು ಅಭಿಪ್ರಾಯ ಪಟ್ಟರು.

ತೆಲಂಗಾಣ ರಾಜ್ಯ ಸ್ಥಪಿಸುವ ಕುರಿತು ತಮ್ಮ ನಿಲವು ಬದಲಾಯಿಸುವ ರಾಜಕೀಯ ಪಕ್ಷಗಳ ಪ್ರವೃತ್ತಿ ತತ್ವರಹಿತವಾಗಿದ್ದು ಎಲ್ಲಾ ಪಕ್ಷಗಳು ಮತ್ತು ಜವಾಬ್ದಾರಿಯುತ ನಾಯಕರು ಈ ಸಮಸ್ಯೆ ಬಗೆಹರಿಸಲು ತಮ್ಮ ಬೆಂಬಲ ಸೂಚಿಸಬೇಕು ಮತ್ತು ವಿಭಜನೆಯತ್ತ ಸಾಗಬೇಕು ಎಂದು ಶ್ರೀ ನಾಯ್ಡು ತಿಳಿಸಿದರು. ಆಂಧ್ರಪ್ರದೇಶದಲ್ಲಿ ಉಂಟಾಗಿರುವ ಬಿಕ್ಕಟ್ಟಿಗೆ ನೇರವಾಗಿ ಕಾಂಗ್ರೆಸ್ ಪಕ್ಷ ಮತ್ತು ಕೇಂದ್ರ ಸರ್ಕಾರವೇ ಹೊಣೆ ಎಂದು ದೂರಿದ ಅವರು, ಅಲ್ಪಾವಧಿಯ ರಾಜಕೀಯ ಲಾಭಕ್ಕಾಗಿ ಬೇಜವಾಬ್ದಾರಿತನದಿಂದ ಮತ್ತು ಪಕ್ಷಪಾತ ದೋರಣೆಯೊಂದಿಗೆ ಕಾಂಗ್ರೆಸ್ ಪಕ್ಷ ವರ್ತಿಸುತ್ತಿದೆ ಎಂದರು.

ಪ್ರಧಾನ ಮಂತ್ರಿ ಪ್ರಸ್ತಾಪಿಸುತ್ತಾರೆ, ಮುಖ್ಯಮಂತ್ರಿಗಳು ವಿರೋಧಿಸುತ್ತಾರೆ ಹಾಗೂ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಪ್ರಸ್ತಾಪಿಸುತ್ತಾರೆ.. ರಾಜ್ಯ ಅಧ್ಯಕ್ಷರು ತಳ್ಳಿಹಾಕುತ್ತಾರೆ ಎಂದು ಶ್ರೀ ನಾಯ್ಡು ಕಾಂಗ್ರೆಸ್ ಪಕ್ಷದ ಕುರಿತು ಅಣಕವಾಡಿದರು. ಕಾಂಗ್ರೆಸ್ ಪಕ್ಷದ ಖೋತಾ ರಾಜಕಾರಣಕ್ಕೆ ಹಿಡಿದ ಕನ್ನಡಿಯದಾಗಿದೆ ಎಂದು ಅವರು ಹೇಳಿದರು.

*****